ದಿಃ 14.10.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**<u>ಮುಖ್ಯ ವಿಚಾರಣೆಃ ಶ್ರೀ ಕೆ.ಎಸ್.ಎ ವಕೀಲರಿಂದ ವಾದಿ ಪರವಾಗಿ</u>**

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ಸ್ವಯಂ ಘೋಷಿತ ಆಸ್ತಿಯ ತೆರಿಗೆ ದೃಢೀಕೃತ ಹಾಜರು ಮಾಡಿದ್ದು ನಿ.ಪಿ.15 ಎಂದು ಗುರುತಿಸಲಾಯಿತು, ಸರ್ವೆ ನಂಬರ್ 10/1 ಎ ಪಹಣಿ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.16 ಎಂದು ಗುರುತಿಸಲಾಯಿತು.
3. ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲು ಶ್ರೀ ಎನ್.ಎಸ್.ಜೆ ವಕೀಲರಿಂದ ಪ್ರತಿವಾದಿ ಪರವಾಗಿ</u>**

4. ಪಾಟೀ ಸವಾಲು ಮಾಡಲು ಸಮಯ ಕೇಳಿದ್ದು, ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 06.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲು ಶ್ರೀ ಎನ್.ಎಸ್.ಜೆ ವಕೀಲರಿಂದ 1 ನೇ ಪ್ರತಿವಾದಿ ಪರವಾಗಿ**

5. 2 ನೇ ಪ್ರತಿವಾದಿಯು ನನ್ನ ಚಿಕ್ಕಪ್ಪನಾಗಿರುತ್ತಾರೆ. 2 ನೇ ಪ್ರತಿವಾದಿಯ ನನ್ನ ತಾಯಿಯ ತಂಗಿಯ ಗಂಡನಾಗಿರುತ್ತಾರೆ. ನನ್ನ ಚಿಕ್ಕಮ್ಮನ ಹೆಸರು ಮಂಜುಳಾ. ನನ್ನ ಚಿಕ್ಕಮ್ಮನಿಗೆ ಒಟ್ಟು 3 ಜನ ಮಕ್ಕಳಿರುತ್ತಾರೆ. ನನ್ನ ಚಿಕ್ಕಮ್ಮ ಮೃತಪಟ್ಟಿದ್ದು ಅವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. 1 ನೇ ಪ್ರತಿವಾದಿಯು ನನಗೆ ಒಬ್ಬರೇ ಮಾವನಾಗಿರುತ್ತಾರೆ. ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಯು 1 ನೇ ಪ್ರತಿವಾದಿಯ ಪತ್ನಿ ಹೇಮಾ ರವರ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವ ಸಿ ಶೆಡ್ಯೂಲ್ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ದಾವ ಸಿ ಶೆಡ್ಯೂಲ್ ಆಸ್ತಿಯು 1 ನೇ ಪ್ರತಿವಾದಿಯು ಮೃತಪಟ್ಟ ನಂತರ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಅರಣ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯು ದಾವ ಸಿ ಶೆಡ್ಯೂಲ್ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ಸದರಿ ಆಸ್ತಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯು ಮೃತಪಟ್ಟ ನಂತರ 1 ನೇ ಪ್ರತಿವಾದಿಯ ಪತ್ನಿ ಹೇಮಾ ರವರು ದಾವ ಸಿ ಶೆಡ್ಯೂಲ್ ಆಸ್ತಿಯಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸಾಕ್ಷಿಯು ಪ್ರಸ್ತುತ ದಾವ ಸಿ ಶೆಡ್ಯೂಲ್ ಆಸ್ತಿಯನ್ನು ಬಾಡಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಮಗಳು ಪ್ರೇಮಾ ಮದುವೆಯಾಗಿ ಅವರ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಒಬ್ಬರೇ ಮಗಳು ಇರುತ್ತಾರೆ ಎಂದರೆ ಸರಿ. ಮೂಡಿಗೆರೆಯಲ್ಲಿ ಇರುವ ದಾವ ಎ ಶೆಡ್ಯೂಲ್ ನಲ್ಲಿ ಇರುವ ಮನೆಯು ಶಿತಿಲ ಅವ್ಯಸ್ಥೆ ಯಲ್ಲಿ ಇರುತ್ತದೆ ಎಂದರೆ ಸರಿ. ಪ್ರಸ್ತುತ

ಸದರಿ ಮನೆಯು ವಾಸಕ್ಕೆ ಯೋಗ್ಯವಾಗಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ಪತ್ನಿಯು ಈಗಲೂ ದಾವ ಸಿ ಶೆಡ್ಯೂಲ್ ನಲ್ಲಿ ವಾಸವಾಗಿದ್ದರು ಸಹ ಲಾಭವನ್ನು ಪಡೆಯುವ ಉದ್ದೇಶದಿಂದ ಸದರಿರವರು ದಾವ ಸಿ ಶೆಡ್ಯೂಲ್ ಆಸ್ತಿಯಲ್ಲಿ ವಾಸವಾಗಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಾವ ಎ ಶೆಡ್ಯೂಲ್ ಆಸ್ತಿಯು ನನ್ನ ಅಜ್ಜಿ ಜಯಮ್ಮ ರವರಿಗೆ ನನ್ನ ಅಜ್ಜಿಯ ತಂದೆಯಿಂದ ವೀಲು ನಾಮೆಯ ಮೂಲಕ ಬಂದಿರುತ್ತದೆ. ದಾವ ಬಿ ಶೆಡ್ಯೂಲ್ ಆಸ್ತಿಯು ನನ್ನ ಅಜ್ಜಿ ಜಯಮ್ಮ ರವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ದಾವ ಸಿ ಶೆಡ್ಯೂಲ್ ಆಸ್ತಿಯು ನನ್ನ ಅಜ್ಜ ಎಂ.ಆರ್. ನಾಗಪ್ಪ ಖರೀದಿ ಮಾಡಿರುತ್ತಾರೆ. ನನ್ನ ಅಜ್ಜ ಮೃತಪಟ್ಟ ನಂತರ ನನ್ನ ಅಜ್ಜಿ ಜಯಮ್ಮ ಮತ್ತು ಅವರ ಮಕ್ಕಳಿಗೆ ಬಂದಿರುತ್ತದೆ. ನನ್ನ ಅಜ್ಜಿ ಜಯಮ್ಮ ರವರು ದಾವ ಸಿ ಶೆಡ್ಯೂಲ್ ಆಸ್ತಿಯನ್ನು 1 ನೇ ಪ್ರತಿವಾದಿಗೆ ದಾನ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಅಜ್ಜಿಗೆ ದಾನ ಪತ್ರ ಮಾಡಲು ಅಧಿಕಾರ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವ ಸಿ ಶೆಡ್ಯೂಲ್ ಆಸ್ತಿಯನ್ನು 1 ನೇ ಪ್ರತಿವಾದಿಗೆ ದಾನ ಮಾಡಿರುವ ವಿಚಾರ ಸದರಿ ಸಮಯದಲ್ಲಿ ನಮ್ಮೆಲ್ಲರಿಗೂ ಗೊತ್ತಿತ್ತು ಎಂದರೆ ಸರಿಯಲ್ಲ. ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಯನ್ನು ನನ್ನ ಅಜ್ಜಿ ಜಯಮ್ಮ 1 ನೇ ಪ್ರತಿವಾದಿಗೆ ವೀಲು ನಾಮೆಯ ಮೂಲಕ ನೀಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಅಜ್ಜಿಯು ಮೃತಪಟ್ಟ ನಂತರ ಸದರಿ ವಿಚಾರವು ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಿಃ 03.12.2016 ರಲ್ಲಿ ನನ್ನ ಅಜ್ಜಿಯು ನಿ.ಪಿ.7 ರಂತೆ ವೀಲು ಮಾಡಿರುತ್ತಾರೆ ಮತ್ತು ನಿ.ಪಿ.8 ರಂತೆ ಅನುಭಂದ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ವಿಚಾರವು ನನ್ನ ಅಜ್ಜಿಯು ಮೃತಪಟ್ಟ ನಂತರ ನನಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವೀಲು ವಿಚಾರವು ನನಗೆ ನನ್ನ ವಕೀಲರಿಂದ ಗೊತ್ತಾಗಿರುತ್ತದೆ. ನಿ.ಪಿ.7 ಮತ್ತು 8 ದಾಖಲೆಯನ್ನು ನಾನು

ಓದಿರುತ್ತೇನೆ. ನಿ.ಪಿ.7 ದಾಖಲೆಯು 4 ರಿಂದ 5 ಪುಟಗಳಲ್ಲಿ ಇರುತ್ತದೆ, ನಿ.ಪಿ.8 ದಾಖಲೆಯು 1 ಪುಟದಲ್ಲಿ ಇರುತ್ತದೆ. ನಿ.ಪಿ.7 ದಾಖಲೆಯನ್ನು ಯಾರು ಜಾರಿ ಮಾಡಬೇಕು ಎನ್ನುವ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ. ದಾವ ಆಸ್ತಿಯನ್ನು ಹೊರತುಪಡಿಸಿ ನನ್ನ ಅಜ್ಜಿಗೆ ನನ್ನ ಅಜ್ಜಿಯ ತಂದೆ ನಂಜಪ್ಪ ರವರಿಂದ ಬಂದ ಸ್ವತ್ತು ಇರುತ್ತದೆ. ಸದರಿ ಸ್ವತ್ತನ್ನು ಮಾರಾಟ ಮಾಡಿ ನನ್ನ ಅಜ್ಜಿಯು ನನ್ನ ತಾಯಿಗೆ 75 ಸಾವಿರ ನೀಡಿರುತ್ತಾರೆ ಎಂದರೆ ಸರಿ. ನನ್ನ ಅಜ್ಜಿಯ ತಂದೆಯಿಂದ ಬಂದಿರುವ ಸ್ವತ್ತುಗಳಿಗೆ ಸಂಬಂಧಿಸಿದಂತೆ ನನ್ನ ಅಜ್ಜಿಯ ಹೆಣ್ಣು ಮಕ್ಕಳಿಗೆ ಹಣದ ರೂಪದಲ್ಲಿ ಭಾಗವನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಅಜ್ಜಿಯ ಎಲ್ಲಾ ಮಕ್ಕಳಿಗೂ ಹಣದ ರೂಪದಲ್ಲಿ ಭಾಗ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿಯ ತಂದೆಯಿಂದ ಬಂದ ಆಸ್ತಿಯಲ್ಲಿ ನನ್ನ ಅಜ್ಜಿಯು ಹೆಣ್ಣು ಮಕ್ಕಳಿಗೆ ಮಾತ್ರ ಪಾಲನ್ನು ನೀಡಿದ್ದು ಗಂಡು ಮಗನಿಗೆ ಯಾವುದೇ ಪಾಲು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿಯು ಹೆಣ್ಣು ಮಕ್ಕಳಿಗೆ ನಗದು ರೂಪದಲ್ಲಿ ಪಾಲನ್ನು ನೀಡಿರುವುದರಿಂದ ಸ್ಥಿರ ಸ್ವತ್ತುಗಳನ್ನು ಮಗನಿಗೆ ಮಾತ್ರ ನೀಡುವ ಇಚ್ಛೆಯನ್ನು ಹೊಂದಿದ್ದರು ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ

ದಿಃ 17.02.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರೆದ ಪಾಟೀ ಸವಾಲು ಶ್ರೀ ಎನ್.ಎಸ್.ಜೆ ವಕೀಲರಿಂದ 1 ನೇ ಪ್ರತಿವಾದಿ ಪರವಾಗಿ**

7. ಶ್ರೀಮತಿ ಎಂ.ಎನ್. ಮಂಜುಳಾ ಎಂದರೆ ನನಗೆ ಚಿಕ್ಕಮ್ಮನಾಗಿರುತ್ತಾರೆ. ಸದರಿ ಮಂಜುಳಾ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಮಂಜುಳಾ ರವರಿಗೆ ಬಿ.ಎಂ. ರಾಜೇಶ್, ಬಿ.ಎಂ. ರಂಜಿತಾ, ಬಿ.ಎಂ. ಕೃಷ್ಣವಂದನಾ ಎನ್ನುವ 3 ಮಕ್ಕಳು ಇರುತ್ತಾರೆ ಎಂದರೆ ಸರಿ. ಮಂಜುಳಾ ರವರ 3 ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಿ.ಪಿ.7 ರಂತೆ ನನ್ನ ಅಜ್ಜಿ ಜಯಮ್ಮ ರವರು ಯಾವುದೇ ವೀಲು ನಾಮೆಯನ್ನು ಮಾಡದೇ ಇದ್ದರು ಸಹ ಸದರಿ ವೀಲು ನಾಮೆಯನ್ನು ನಾವೇ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.8 ರಂತೆ ನನ್ನ ಅಜ್ಜಿಯು ಯಾವುದೇ ಅನುಭಂದ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.8 ದಾಖಲೆಯನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.7 ದಾಖಲೆಯನ್ನು ಯಾರು ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.7 ಮತ್ತು 8 ದಾಖಲೆಗೆ ಯಾರು ಸಾಕ್ಷಿದಾರರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜಿ ಜಯಮ್ಮ ಮೃತಪಟ್ಟ ನಂತರ ನಿ.ಪಿ.7 ಮತ್ತು 8 ರಲ್ಲಿ ಇರುವ ಸಾಕ್ಷಿದಾರರು ಯಾರು ಎಂದು ತಿಳಿದುಕೊಳ್ಳಲು ನಾನು ಪ್ರಯತ್ನಿಪಟ್ಟಿರುವುದಿಲ್ಲ. ನಿ.ಪಿ.7 ಮತ್ತು 8 ದಾಖಲೆಗಳು ನನ್ನ ಅಜ್ಜಿ ಜಯಮ್ಮ ರವರ ಬಳಿಯೇ ಇತ್ತು. ಅಜ್ಜಿ ಜಯಮ್ಮ ಮೃತಪಟ್ಟ ನಂತರ ನಿ.ಪಿ.7 ಮತ್ತು 8 ದಾಖಲೆಯು ನನಗೆ ದೊರೆತಿರುತ್ತದೆ. ನಿ.ಪಿ.7 ಮತ್ತು 8 ದಾಖಲೆಯನ್ನು ನಾನು ಸೃಷ್ಟಿಸಿದ ಕಾರಣ ಅದರಲ್ಲಿ ಇರುವ ಸಾಕ್ಷಿದಾರರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿಯನ್ನು ನನ್ನ ಅಜ್ಜಿಯ ಖರೀದಿ ಮಾಡಿರುವ ಆಸ್ತಿ ಎಂದರೆ ಸಾಕ್ಷಿಯು

ಪಿಂಚಣಿ ಮತ್ತು ದಾವ ಎ ಶೆಡ್ಯೂಲ್ ಆಸ್ತಿಯ ಬಾಡಿಗೆ ಹಣದಿಂದ ದಾವ ಬಿ ಶೆಡ್ಯೂಲ್ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವ ಎ ಶೆಡ್ಯೂಲ್ ಸ್ವತ್ತಿನಲ್ಲಿ ಇರುವ ಮನೆಯ ಶಿಥಿಲ ಅವಸ್ಥೆಯಲ್ಲಿ ಇದುದ್ದರಿಂದ ಸದರಿ ಮನೆಗೆ ಯಾವುದೇ ಬಾಡಿಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಒಬ್ಬರೆ ಗಂಡು ಮಗ ಇದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ಮಗ ಸತೀಶ್ ಈಗ ಮೃತಪಟ್ಟಿರುತ್ತಾರೆ. 1 ನೇ ಪ್ರತಿವಾದಿಯು ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ದಾವ ಸಿ ಶೆಡ್ಯೂಲ್ ಆಸ್ತಿಯಲ್ಲಿ ಇರುವ ಮನೆಯನ್ನು 1 ನೇ ಪ್ರತಿವಾದಿಯು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜಿಗೆ ಆದಾಯ ಇರದ ಕಾರಣ 1 ನೇ ಪ್ರತಿವಾದಿಯೇ ದಾವ ಸಿ ಶೆಡ್ಯೂಲ್ ನಲ್ಲಿ ಇರುವ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವ ಆಸ್ತಿಯನ್ನು ನಮ್ಮದಾಗಿಸಬೇಕು ಎನ್ನುವ ಉದ್ದೇಶದಿಂದ ನಿ.ಪಿ.7 ಮತ್ತು 8 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವ ಎ ಶೆಡ್ಯೂಲ್ ಆಸ್ತಿಯನ್ನು ನನ್ನ ಅಜ್ಜಿ ಜಯಮ್ಮ ರವರಿಗೆ ಅವರ ತಂದೆ ನಂಜಪ್ಪರವರಿಂದ ವೀಲು ಮೂಲಕ ಬಂದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಜಯಮ್ಮ ರವರ ಮಕ್ಕಳಿಗೂ ನಂಜಪ್ಪ ರವರು ವೀಲು ನಾಮೆ ಬರೆದಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

8. ದಾವ ಎ ಶೆಡ್ಯೂಲ್ ಆಸ್ತಿಯು ಜಯಮ್ಮ ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಯು ಜಯಮ್ಮ ರವರ ಸ್ವಯಾರ್ಜಿತ ಆಸ್ತಿ ಆಗಿದ್ದು ಸದರಿ ಆಸ್ತಿಯನ್ನು ಜಯಮ್ಮ ರವರು 1 ನೇ ಪ್ರತಿವಾದಿಗೆ ದಿಃ 09.05.2001 ರ ನೊಂದಾಯಿತ ವೀಲು ನಾಮೆಯಂತೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಜಯಮ್ಮನನ್ನು 1 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದ ಕಾರಣ ದಾವ ಸಿ ಶೆಡ್ಯೂಲ್ ಆಸ್ತಿಯನ್ನು

ನಿ.ಪಿ.3 ರಂತೆ ನನ್ನ ಅಜ್ಜಿಯು 1 ನೇ ಪ್ರತಿವಾದಿಗೆ ದಾನ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಜಯಮ್ಮ ಮೃತಪಟ್ಟ ನಂತರ ದಾವ ಎ, ಬಿ ಮತ್ತು ಸಿ ಶೆಡ್ಯೂಲ್ ಆಸ್ತಿಗಳ ಖಾತೆಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಮೃತಪಟ್ಟ ನಂತರ ದಾವ ಎ, ಬಿ ಮತ್ತು ಸಿ ಶೆಡ್ಯೂಲ್ ಆಸ್ತಿಗಳ ಖಾತೆಯು 1 ನೇ ಪ್ರತಿವಾದಿಯ ಪತ್ನಿ ಹೇಮಾವತಿ ರವರ ಹೆಸರಿನಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಅಜ್ಜಿಯು ಮೃತಪಡುವ ಪೂರ್ವದಲ್ಲಿ ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳಿಗೆ 1 ನೇ ಪ್ರತಿವಾದಿಯ ಹೆಸರಿಗೆ ದಿಃ 10.12.2016 ರಂದು ವೀಲು ನಾಮೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಬಿ. ಶಿವಾನಂದ್, ಬಿ. ಮಹೇಶ್, ಸಿದ್ದರಮೇಶ್, ಉಮೇಶ್ ನನಗೆ ಪರಿಚಯ ಇರುತ್ತದೆ ಎಂದರೆ ಸರಿ. ಎಂ.ಡಿ.ಇಂದ್ರೇಶ್ ಯಾರು ಎಂದು ನನಗೆ ಗೊತ್ತಿಲ್ಲ. ಬಿ. ಶಿವಾನಂದ್ ಮತ್ತು ಎಂ.ಡಿ. ಇಂದ್ರೇಶ್ ರವರ ಸಮಕ್ಷಮ ನನ್ನ ಅಜ್ಜಿಯು 1 ನೇ ಪ್ರತಿವಾದಿಯ ಹೆಸರಿಗೆ ದಿಃ 10.12.2016 ರಂದು ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು ವೀಲು ನಾಮೆಯ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು ವೀಲು ನಾಮೆಯ ಮೂಲಕ ನನ್ನ ಅಜ್ಜಿಯು 1 ನೇ ಪ್ರತಿವಾದಿಗೆ ಬರೆದುಕೊಟ್ಟಿರುವುದರಿಂದ ಸದರಿ ಆಸ್ತಿಯಲ್ಲಿ ಭಾಗ ಕೇಳಲು ವಾದಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

9. ನನ್ನ ಅಜ್ಜಿ ಜಯಮ್ಮ ರವರು ಅವರಿಗೆ ಸೇರಿದ ಒಂದು ಸ್ವತ್ತನ್ನು ಮಾರಾಟ ಮಾಡಿ ಸದರಿ ಮಾರಾಟದಿಂದ ಬಂದ ಹಣವನ್ನು ವಿಭಾಗದ ಸಲುವಾಗಿ ನನ್ನ ತಾಯಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಅಜ್ಜಿಯು ಎಲ್ಲಾ ಮಕ್ಕಳಿಗೆ ಸದರಿ ಸ್ವತ್ತಿನ ಹಣವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿಯು ಸದರಿ ಸ್ವತ್ತನ್ನು ಮಾರಾಟ ಮಾಡಿ ಹೆಣ್ಣು ಮಕ್ಕಳಿಗೆ ಮಾತ್ರ ಪಾಲು ನೀಡಿ ಉಳಿಕೆ ಆಸ್ತಿಗಳಲ್ಲಿ 1 ನೇ ಪ್ರತಿವಾದಿಗೆ ಮಾತ್ರ ಹಕ್ಕು ಇರುತ್ತದೆ ಎಂದು

ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರು ಸಹ ದಾವ ಆಸ್ತಿಯಲ್ಲಿ ಅಕ್ರಮವಾಗಿ ಪಾಲು ಪಡೆಯುವ ಉದ್ದೇಶದಿಂದ ನನ್ನ ತಾಯಿಯ ಹೆಸರಿನಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.7 ಮತ್ತು 8 ದಾಖಲೆಯು ನಾನು ಸೃಷ್ಟಿಸಿರುವ ಕಾರಣ ದಾವ ಆಸ್ತಿಯಲ್ಲಿ ಯಾವುದೇ ಹಕ್ಕು ಪಡೆಯಲು ವಾದಿಯು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೂ 1 ನೇ ಪ್ರತಿವಾದಿಗೂ ಯಾವುದೇ ವೈ ಮನಸ್ಸು ಇರದಿದ್ದರು ನಾನೇ ನನ್ನ ತಾಯಿಗೆ ಪ್ರಚೋದಿಸಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮೃತಪಡುವ 4-5 ವರ್ಷಗಳ ಹಿಂದೆ ದೃಷ್ಟಿ ದೋಷವಿದ್ದು ಕಣ್ಣು ಕಾಣುತ್ತಿರಲಿಲ್ಲ ಎಂದರೆ ಸಾಕ್ಷಿಯು ಕಣ್ಣು ಕಾಣುತ್ತಿರಲಿಲ್ಲ ಆದರೆ ಎಷ್ಟು ವರ್ಷದಿಂದ ಕಾಣುತ್ತಿರಲಿಲ್ಲ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಮಗ ಮೃತಪಟ್ಟ ಕಾರಣ ಮತ್ತು 1 ನೇ ಪ್ರತಿವಾದಿಯೇ ನನ್ನ ಅಜ್ಜಿ ಜಯಮ್ಮನನ್ನು ನೋಡಿಕೊಳ್ಳುತ್ತಿದ್ದ ಕಾರಣ ನನ್ನ ಅಜ್ಜಿಗೆ 1 ನೇ ಪ್ರತಿವಾದಿಯ ಮೇಲೆ ಅತೀವ ಪ್ರೀತಿ ವಾತ್ಸಲ್ಯ ಇದ್ದ ಕಾರಣ ದಾವ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳನ್ನು ವೀಲು ನಾಮೆಯ ಮೂಲಕ 2 ಬಾರಿ ವೀಲು ನಾಮೆಯ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವ ಆಸ್ತಿಗಳಲ್ಲಿ ಯಾವುದೇ ರೀತಿಯ ಹಕ್ಕು ಇರದೇ ಇದ್ದರು ಸುಳ್ಳು ಸಾಧನೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಕಾರಣದಿಂದಲೇ ನನ್ನ ಚಿಕ್ಕಮ್ಮ ಮಂಜುಳಾ ರವರ ಮಕ್ಕಳನ್ನು ಉದ್ದೇಶ ಪೂರ್ವಕವಾಗಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ